# ಡಾ. ಬಿ.ಆರ್. ಅಂಬೇಡ್ಕರ್ ಅವರ ದೃಷ್ಟಿಯಲ್ಲಿ ಅಸ್ಪೃಶ್ಯತೆ

ರುಕ್ಮಿಣಿ ವಿ.

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸ.ಪ್ರ.ದ. ಕಾಲೇಜು, ಚನ್ನಪಟ್ಟಣ.

DOI: https://doi.org/10.5281/zenodo.15504614

## ABSTRACT:

ಸಂವಿಧಾನ ಶಿಲ್ಪಿ ಡಾ. ಬಿ ಆರ್ ಅಂಬೇಡ್ಕರ್ ಅವರು ಹಿಂದೂ ಸಮಾಜಕ್ಕೆ ಕಳಂಕವೆನಿಸಿರುವ ಅಸ್ಪೃಶ್ಯತೆಯ ವಿವಿಧ ಆಯಾಮಗಳನ್ನು ವೈಜ್ಞಾನಿಕವಾಗಿ ಅಧ್ಯಯನಕ್ಕೆ ಒಳಪಡಿಸಿದ್ದಾರೆ. ಭಾರತದಲ್ಲಿ ಮಾತ್ರ ಇದರ ಆಚರಣೆ ಏಕೆ ಮುಂದುವರೆದಿದೆ ಎಂಬುದರ ಬಗ್ಗೆ ವಿಶ್ಲೇಷಣೆ ನೀಡಿದ್ದಾರೆ. ಹಿಂದೂ ಸಮಾಜವನ್ನು ಮಾನವೀಯ ಮೌಲ್ಯಗಳು ಸಮಾನತೆ ಸ್ವಾತಂತ್ರ್ಯ, ನ್ಯಾಯ, ವಿಶ್ವ ಭ್ರಾತೃತ್ವದ ಆಧಾರದ ಮೇಲೆ ಪುನರ್ಘಟಿಸುವ ಪ್ರಯತ್ನವನ್ನು ಅವರ ಸಾಮಾಜಿಕ ಚಿಂತನೆಯಲ್ಲಿ ಕಾಣಬಹುದು. ಸಾಮಾಜಿಕ ಸಂಶೋಧನೆಯ ನೆಲೆಗಟ್ಟಿನಲ್ಲಿ ಅಂಬೇಡ್ಕರ್ ಅವರ ಅಸ್ಪೃಶ್ಯತೆಯ ಕುರಿತ ಸಾಮಾಜಿಕ, ರಾಜಕೀಯ, ಧಾರ್ಮಿಕ ವಿಚಾರಗಳು ತುಂಬಾ ಮಹತ್ವವಾಗಿವೆ. ಯುರೋಪಿನ ಚರಿತ್ರೆಯಲ್ಲಿ ಕಂಡುಬರುವ ಅನೇಕ ಅನ್ಯಾಯಗಳನ್ನು ಮೂಢನಂಬಿಕೆಗಳನ್ನು ನಿವಾರಿಸಲಾಗಿದೆ. ಆದರೆ ಭಾರತದಲ್ಲಿ ಹಿಂದೂ ಬ್ರಾಹ್ಮಣರು ಅಸ್ಪಶ್ಯತೆಯ ನಂಬಿಕೆಯಿಂದ ಮುಕ್ತವಾಗಿರುವುದು ನಿರೀಕ್ಷಿತ ಪ್ರಮಾಣದಲ್ಲಿ ಕಂಡು ಬರುತ್ತಿಲ್ಲ. ಹಿಂದುಗಳು ಅಸ್ಪೃಶ್ಯತೆ ವಿಷಯದಲ್ಲಿ ಸ್ವಹಿತಾಸಕ್ತಿ ಹೊಂದಿರುವುದು ಮೇಲ್ನೋಟಕ್ಕೆ ಗೋಚರಿಸುವ ಸಂಗತಿಯಾಗಿದೆ. ಧರ್ಮದ ತಳಹದಿಯನ್ನು ಹೊಂದಿರುವ ಅಸ್ಪೃಶ್ಯತೆಯು ಹಿಂದುಗಳ ನಡುವೆ ನ್ಯಾಯ ಸ್ಥಾಪಿಸಲು ಅಸಮರ್ಥವಾಗಿದೆ. ಸಾಮಾಜಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ ಹಿಂದುಳಿದಿರುವ ಅಸ್ಪೃಶ್ಯರು ಜ್ಞಾನ ಮತ್ತು ಶಿಕ್ಷಣವನ್ನು ಪಡೆದುಕೊಳ್ಳುವುದರ ಮೂಲಕ ಅನ್ಯಾಯ ಅನರ್ಥ ಅಥವಾ ಅನಾಚಾರಗಳನ್ನು ವಿರೋಧಿಸಬಹುದು ಎಂಬುದು ಅಂಬೇಡ್ಕರ್ ಅವರ ಪ್ರಬಲವಾದ ನಂಬಿಕೆಯಾಗಿತ್ತು. ಜಗತ್ತಿನ ಇತರ ದೇಶಗಳಲ್ಲಿ ಅಸ್ತಿತ್ವದಲ್ಲಿದ್ದ ದಾಸ್ಯ ಪ್ರವೃತ್ತಿಗೂ ಅವುಗಳ ತಳಹದಿಗೂ ಭಾರತದಲ್ಲಿನ ಅಸ್ಪೃಶ್ಯತೆಯ ತಳಹದಿಗೂ ಇರುವ ಸ್ಪಷ್ಟ ವ್ಯತ್ಯಾಸವನ್ನು ಅಂಬೇಡ್ಕರ್ ಗುರುತಿಸಿದ್ದರು. ಮಾನವ ಇತಿಹಾಸದಲ್ಲಿ ಅತ್ಯಂತ ನಿಕೃಷ್ಟ ಆಚರಣೆ ಅಸ್ಪೃಶ್ಯತೆ ಎಂಬುದು ಅಂಬೇಡ್ಕರ್ ಅಭಿಪ್ರಾಯವಾಗಿತ್ತು. ಜಾತಿ ಪದ್ಧತಿ ಹಾಗೂ ಅಸ್ಪೃಶ್ಯತೆಯ ನಿವಾರಣೆ ಕುರಿತು ಹಿಂದುಗಳ ಹಾಗೂ ಅಸ್ಪೃಶ್ಯರ ನಡುವೆ ಘರ್ಷಣೆ ಅನಿವಾರ್ಯ ಎಂಬುದನ್ನು ಮನಗಂಡಿದ್ದರು. ಸಂವಿಧಾನದ ಆರ್ಟಿಕಲ್ 17ರಲ್ಲಿ ಅಸ್ಪೃಶ್ಯತೆ ನಿವಾರಣೆಯ ಕಾಯ್ದೆಯನ್ನು ಜಾರಿಗೆ ತಂದಿದ್ದರೂ ಅಂಬೇಡ್ಕರ್‌ರ ಅಸ್ಪೃಶ್ಯತೆಯ ನಿವಾರಣೆಯ ಕನಸು ಇನ್ನು ಪೂರ್ಣವಾಗಿ ಸಾಕಾರಗೊಂಡಿಲ್ಲವೆಂದು ಹೇಳಬಹುದು. ಧರ್ಮದ ಬೆಂಬಲವಿರುವ ಒಂದು ಸಾಮಾಜಿಕ ಆಚರಣೆಯ ನಿವಾರಣೆ ಎಷ್ಟು ಕಷ್ಟ ಸಾಧ್ಯ ಎಂಬುದನ್ನು ಅಂಬೇಡ್ಕರ್ ಮನಗಂಡಿದ್ದರು.

## KEYWORDS:

ಅಸ್ಪೃಶ್ಯತೆ, ಗುಲಾಮಗಿರಿ, ಗೇಣಿದಾರ, ಜೀತಪದ್ದತಿ, ಸಾಮಾಜಿಕ ಅಸಮಾನತೆ.

ಸ್ವತಂತ್ರ ಪೂರ್ವ ಭಾರತದ ರಾಜಕಾರಣದಲ್ಲಿ ಅನೇಕ ಉದ್ದಾಮ ಪ್ರತಿಭಾನ್ವಿತ ರಾಜಕಾರಣಿಗಳು, ಮುತ್ಸದ್ದಿಗಳು, ದೇಶಪ್ರೇಮಿಗಳು ಕಾಣಿಸಿಕೊಂಡು ದೇಶದ ವಿಮೋಚನೆಗಾಗಿ ಶ್ರಮಿಸಿದ್ದಾರೆ. ಡಾ. ಬಿ ಆರ್ ಅಂಬೇಡ್ಕರ್ ಅಂತಹ ನಾಯಕರಲ್ಲಿ ಒಬ್ಬರು. ಸ್ವತಂತ್ರ ಹೋರಾಟದ ಭಾಗವಾಗಿಯೇ ಅಸ್ಪೃಶ್ಯತಾ ನಿವಾರಣೆ, ದುರ್ಬಲ ವರ್ಗಗಳ ವಿಮೋಚನೆ ದೇಶದ ಅರ್ಥಪೂರ್ಣ ಸ್ವತಂತ್ರ ಎಂದು ಪ್ರತಿಪಾದಿಸಿದ ಏಕೈಕ ನಾಯಕ. ಇವರು ಕೇವಲ ಅಸ್ಪೃಶ್ಯರ ನಾಯಕರಾಗಿರದೆ, ಮಾನವ ಕುಲದ ಹಕ್ಕುಗಳು ಸ್ವತಂತ್ರ ಸಮಾನತೆ ಮತ್ತು ಭ್ರಾತೃತ್ವದ ಸ್ಥಾಪನೆಗಾಗಿ ಹೋರಾಡಿದ ಮಹಾನುಭಾವರು. ಭಾರತವು ಜಾತ್ಯಾತೀತ, ಸಮಾಜವಾದಿ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮುಂದುವರೆಯಬೇಕೆಂಬ ಆಚಲ ವಿಶ್ವಾಸ ಹೊಂದಿದ್ದರು. ಮಾನವೀಯತೆಯ ಸಾಕಾರ ಮೂರ್ತಿ, ದೀನದಲಿತರ ನೋವಿಗೆ ಸದಾ ಸ್ಪಂದಿಸುತ್ತಿದ್ದ ಮಹಾಪುರುಷರಾಗಿದ್ದರು. ಜಾತಿ ಪದ್ಧತಿ, ಅಸ್ಪೃಶ್ಯತೆ, ಬಡತನ ಮುಂತಾದ ಸಾಮಾಜಿಕ, ಆರ್ಥಿಕ ಸಮಸ್ಯೆಗಳ ಆಳವಾದ ಅಧ್ಯಯನ ಮಾಡಿ ಅವುಗಳ ಉಗಮ ಬೆಳವಣಿಗೆ ವಸ್ತು ಸ್ಥಿತಿಯ ಬಗ್ಗೆ ತಮ್ಮದೇ ಆಗಿರುವ ವಿಶಿಷ್ಟ ಸಿದ್ಧಾಂತಗಳನ್ನು ರೂಪಿಸಿ ನಿವಾರಣೆಯ ವಿಧಾನಗಳನ್ನು ನಿರೂಪಿಸಿದ್ದಾರೆ. ಅಂಬೇಡ್ಕರ್ ಅವರ ಪತ್ರಿಕೆಗಳಾದ ಸಮತ, ಜನತಾ ಮತ್ತು ಬಹಿಷ್ಕೃತ ಭಾರತ ಇವುಗಳು ಮರಾಠಿಯಲ್ಲಿ ಅಗ್ರ ಲೇಖನಗಳಾಗಿ ಮೂಡಿಬಂದಿವೆ. ಭಾರತದಲ್ಲಿ ಅಸ್ಪೃಶ್ಯರು ಮತ್ತು ಅಸ್ಪೃಶ್ಯತೆಯ ಸಮಸ್ಯೆಯ ವೈಜ್ಞಾನಿಕ ವಿಶ್ಲೇಷಣೆಯನ್ನು ಮಾಡಿದ್ದಾರೆ. ಹಿಂದೂ ಸಮಾಜಕ್ಕೆ ಕಳಂಕವೆನಿಸಿರುವ ಅಸ್ಪೃಶ್ಯತೆಯ ವಿವಿಧ ಆಯಾಮಗಳು ವಿಶ್ವದಲ್ಲಿ ಮನುಕುಲವು ಅನುಭವಿಸಿರುವ ಗುಲಾಮಗಿರಿಯ ಸಂಕೇತಗಳು ಎಂಬಂತಿದೆ. ಜಗತ್ತಿನ ಬೇರೆ ಬೇರೆ ಕಡೆಗಳಲ್ಲಿ ಗುಲಾಮಗಿರಿ ಕಣ್ಮರೆಯಾಗಿದ್ದರೂ ಭಾರತದಲ್ಲಿ ಜಾತಿ ವ್ಯವಸ್ಥೆ ಅಸ್ಪೃಶ್ಯತೆ ಮುಂದುವರೆದಿದೆ. ಅಸ್ಪೃಶ್ಯತೆಯನ್ನು ಕುರಿತು ಅಂಬೇಡ್ಕರ್ ರವರ ಅಧ್ಯಯನ ಕೆಳಕಂಡ ಅಂಶಗಳನ್ನು ಒಳಗೊಂಡಿದೆ.

ಮೊದಲನೆಯದಾಗಿ ಅಸ್ಪೃಶ್ಯತೆಯ ಮೂಲವನ್ನು ನೋಡುವುದಾದರೆ ಅಸ್ಪೃಶ್ಯತೆಯ ಆಚರಣೆಯಲ್ಲಿ ಸ್ಪೃಶ್ಯರ ಪಾತ್ರ ಏನೇನೂ ಇಲ್ಲ. ಅವರ ಸಮಸ್ಯೆಗೆ ತಾವು ಜವಾಬ್ದಾರರಲ್ಲ ಎಂಬ ಭಾವನೆ ಕಾಣುತ್ತದೆ. ಯಹೂದ್ಯರ ಬಗ್ಗೆ ಕ್ರೈಸ್ತ ಮತದವರು ಹೊಂದಿರುವ ಮನೋಭಾವವು ಹೀಗೆಯೇ ಇದೆ. ಆದರೆ ಯಹೂದಿ ಮತ್ತು ಕ್ರಿಶ್ಚಿಯನರ ಮತನಂಬಿಕೆಗಳು ಮೂಲತಃ ವಿರುದ್ಧವಾಗಿವೆ. ಹಿಂದುಗಳು ಮತ್ತು ಅಸ್ಪೃಶ್ಯರನ್ನು ಪೂಜೆ, ಪುನಸ್ಕಾರಗಳು ಪ್ರತ್ಯೇಕ ಗೊಳಿಸುವುದಿಲ್ಲ. ಅವರಿಬ್ಬರಿಗೂ ಸಮಾನ ಧರ್ಮವಿದೆ. ಯಹೂದ್ಯರು ಕ್ರೈಸ್ತ ಧರ್ಮೀಯರಿಂದ ಬೇರ್ಪಟ್ಟು ಇರಬೇಕೆಂದು ಸ್ವತಃ ತಾವೇ ಆಶಿಸುತ್ತಾರೆ. ನಾಗರಿಕತ್ವದಲ್ಲಿ ಸಮಾನತೆ ಉಂಟಾದರೆ ಯಹೂದಿ ಧರ್ಮದ ಉಳಿಯುವಿಕೆಗೆ ಕುತ್ತು ಬರುತ್ತದೆ ಎಂಬುದು ಅವರ ಭಾವನೆ.

ಆದರೆ ಅಸ್ಪೃಶ್ಯನ ಒಬ್ಬನ ವಿಚಾರದಲ್ಲಿ ನಾವು ಆತನನ್ನು ಕುಷ್ಠರೋಗಿ ಅಂತಲೋ, ಪಾತಕಿ ಅಂತಲೋ, ಧಾರ್ಮಿಕ ಭಿನ್ನತೆಯ ಅಗಾಧ ಕಂದಕವಿದೆ ಅಂತಲೋ ಅಥವಾ ಅಸ್ಪೃಶ್ಯನೆ ಹಿಂದುಗಳ ಜೊತೆ ಸೇರ್ಪಡೆಗೊಳ್ಳಲು ಇಚ್ಚಿಸುವುದಿಲ್ಲವೆಂದು ಸಬೂಬನ್ನು ಹೇಳಲಾಗುವುದಿಲ್ಲ.

ಅಸ್ಪೃಶ್ಯತೆ ಎಂಬುದು ಅವನ ಇಚ್ಛೆಯ ಪರಿಣಾಮ ಉಂಟಾಗಿರುವುದಲ್ಲ. ಇತರರೊಂದಿಗೆ ಸಮ್ಮಿಳಿತರಾಗಲು ಅವರು ಇಷ್ಟಪಡುವುದಿಲ್ಲವೆಂಬ ಕಾರಣದಿಂದಾಗಿ ಅವರಿಗೆ ಈ ಶಿಕ್ಷೆ ವಿಧಿಸಲಾಗಿಲ್ಲ. ಯಹೂದ್ಯರ ಮತ್ತು ಅಸ್ಪೃಶ್ಯರ ಸಮಸ್ಯೆಯಲ್ಲಿ ಸಮಾನ ಲಕ್ಷಣಗಳಿದ್ದರೂ ಎರಡರಲ್ಲೂ ಮೂಲಭೂತ ವ್ಯತ್ಯಾಸವಿದೆ. ಯಹೂದ್ಯರ ವಿಚಾರದಲ್ಲಿ ಅದು ಅವರ ಆಯ್ಕೆ ಅಸ್ಪೃಶ್ಯರ ವಿಚಾರದಲ್ಲಿ ಅದು ಬಲವಂತದ ಹೇರಿಕೆ.

1881 ರಲ್ಲಿ ಭಾರತದ ಮೊದಲ ಸಾಮಾನ್ಯ ಜನಗಣತಿ ನಡೆಯಿತು. ಅಲ್ಲಿ ಕೇವಲ ಒಟ್ಟಾರೆ ಜನಸಂಖ್ಯೆಗೆ ಮಾತ್ರ ಮನ್ನಣೆ ದೊರೆಯಿತು. 1891 ರಲ್ಲಿ ಜನಸಂಖ್ಯೆಯನ್ನು ಜಾತಿ ಜನಾಂಗ ಮತ್ತು ಶ್ರೇಣಿಗಳ ಆಧಾರದ ಮೇಲೆ ವಿಂಗಡಿಸುವ ಪ್ರಯತ್ನ ನಡೆಯಿತು. 1901ರಲ್ಲಿ ಜನಗಣತಿಯ ವರದಿಯು ಜಾತಿ ಆಧಾರದ ಮೇಲೆ ಕೇಂದ್ರೀಕೃತವಾಗಿತ್ತು. ಭಾರತದ ಸಾಮಾಜಿಕ ಪಾತಳಿಯ ಅಡಿಗಲ್ಲು ಜಾತಿ. ಹಿಂದೂ ಎಂಬ ಪದವನ್ನು ಅತ್ಯಂತ ವ್ಯಾಪಕ ಅರ್ಥದಲ್ಲಿ ಬಳಸಿ ನೋಡಿದರೆ ಪ್ರತಿಯೊಬ್ಬ ಹಿಂದೂ, ಜಾತಿಯಲ್ಲಿ ಹುಟ್ಟಿದ್ದಾನೆ ಮತ್ತು ಆ ಜಾತಿಯು ಅವನ ಧಾರ್ಮಿಕ, ಸಾಮಾಜಿಕ, ಆರ್ಥಿಕ, ಕೌಟುಂಬಿಕ ಜೀವನವನ್ನು ತೊಟ್ಟಿಲಿನಿಂದ ಸ್ಮಶಾನದ ಗುಂಡಿಯವರಿಗೆ ನಿರ್ಧರಿಸುತ್ತದೆ. ಜಗತ್ತಿನ ವಿವಿಧ ದೇಶಗಳಲ್ಲಿ ಸಮಾಜದ ವಿವಿಧ ಸ್ಥರಗಳನ್ನು ನಿರ್ಧರಿಸುವುದರಲ್ಲಿ ಪ್ರಮುಖ ಅಂಶಗಳು ಸಂಪತ್ತು ವಿದ್ಯಾಭ್ಯಾಸ ಮತ್ತು ಉದ್ಯೋಗ, ಹಾಗೆಯೇ ಅವು ಅಲ್ಲಿ ಚಲನಾತ್ಮಕವಾಗಿವೆ. ಉದಾರ ಭಾವನೆಗಳಿಂದ ಕೂಡಿದೆ. ಭಾರತದಲ್ಲಿ ಪಾರಮಾರ್ಥಿಕ ಮತ್ತು ಸಾಮಾಜಿಕ ಪರಿವರ್ತನೆ ಹಾಗೂ ಸಾಂಪ್ರದಾಯಿಕ ಉದ್ಯೋಗಗಳು ಉಳಿದೆಲ್ಲಾ ಅಂಶಗಳನ್ನು ಬದಿಗೊತ್ತುತ್ತದೆ. ಹೀಗಾಗಿ ಪಾಶ್ಚಿಮಾತ್ಯ ದೇಶಗಳ ಜನಗಣತಿಯು ಆರ್ಥಿಕ ಅಥವಾ ಕಸುಬು ಆಧಾರಿತ ಅಂಕಿ ಅಂಶಗಳ ಕಡೆಗೆ ಕೇಂದ್ರೀಕರಿಸುತ್ತದೆ. 1901ರ ಜನಗಣತಿಯಲ್ಲಿ ಅಸ್ಪೃಶ್ಯರ ಒಟ್ಟು ಸಂಖ್ಯೆಯನ್ನು ಸರಿಯಾಗಿ ನಿರ್ಧರಿಸುವುದು ಸಾಧ್ಯವಾಗಲಿಲ್ಲ. ಏಕೆಂದರೆ ಅಸ್ಪೃಶ್ಯರು ಯಾರನ್ನು ನಿರ್ಧರಿಸಲು ನಿಕೃಷ್ಟವಾದ ಪ್ರಮಾಣಗಳನ್ನು ಅನ್ವಯಿಸಲಿಲ್ಲ ಜೊತೆಗೆ ಅಸ್ಪೃಶ್ಯರಾಗಿದ್ದವರೊಂದಿಗೆ ಅಸ್ಪೃಶ್ಯರಲ್ಲದವರನ್ನು ಆರ್ಥಿಕ ಮತ್ತು ಶೈಕ್ಷಣಿಕ ದೃಷ್ಟಿಯಿಂದ ಬೆರೆಸಲಾಯಿತು. 1911ರ ಜನಗಣತಿಯಲ್ಲಿಅಸ್ಪೃಶ್ಯರನ್ನು ಗುರುತಿಸಲು ಬೇಕಾದ ಹತ್ತು ಸೂತ್ರಗಳನ್ನು ಗುರುತಿಸಿಕೊಳ್ಳಲಾಯಿತು. ಬ್ರಾಹ್ಮಣರ ಶ್ರೇಷ್ಠತೆಯನ್ನು ನಿರಾಕರಿಸುವವರು, ಹಿಂದೂ ದೇವಾಲಯದೊಳಗೆ ಪ್ರವೇಶ ಇಲ್ಲದವರು, ಮಾಲಿನ್ಯ

ಉಂಟುಮಾಡುವವರು ಸತ್ತವರನ್ನು ಹೂಳುವವರು, ಗೋವನ್ನು ಪೂಜಿಸದವರು, ಗೋವನ್ನು ತಿನ್ನುವವರು ಎಂಬುವು ಅವುಗಳಲ್ಲಿ ಕೆಲವು. 1910 ರ ಜನವರಿ 27ರಂದು ಮುಸ್ಲಿಮರು ಸರ್ಕಾರಕ್ಕೆ ಮನವಿ ಒಂದನ್ನು ಸಲ್ಲಿಸುತ್ತಾರೆ. ಅಸ್ಪೃಶ್ಯರನ್ನು ಹಿಂದುಗಳಿಂದ ಬೇರ್ಪಡಿಸಬೇಕು ಎಂದು. ರಾಜಕೀಯ ಮೀಸಲಾತಿಯನ್ನು ಸ್ಪೃಶ್ಯರಾದ ಹಿಂದೂಗಳ ಸಂಖ್ಯೆಗೆ ಅನುಗುಣವಾಗಿ ನೀಡಬೇಕೆ ವಿನಃ ಇಡೀ ಹಿಂದೂಗಳ ಸಂಖ್ಯೆಗೆ ಅನುಗುಣವಾಗಿ ಅಲ್ಲ ಎಂಬ ಅವರ ಕೋರಿಕೆಯಲ್ಲಿದ್ದದ್ದು ಅಸ್ಪೃಶ್ಯರು ಹಿಂದೂಗಳಲ್ಲ ಎಂಬ ವಾದ. 1911ರ ಜಾತಿಗಣತಿಯು ಅಸ್ಪೃಶ್ಯರ ಸಂಖ್ಯೆಯನ್ನು ತಿಳಿಯುವುದರಲ್ಲಿ ಮೊತ್ತ ಮೊದಲ ಹೆಜ್ಜೆಯನ್ನು ಇಡುತ್ತದೆ. 1930ರಲ್ಲಿ ಬ್ರಿಟಿಷ್ ಆಳ್ವಿಕೆಯ ಭಾರತದಲ್ಲಿದ್ದ ಒಟ್ಟು ಅಸ್ಪೃಶ್ಯರ ಸಂಖ್ಯೆ 4 ಕೋಟಿ 45 ಲಕ್ಷ. ಶಾಸನಸಭೆಗಳಿಗೆ ಮತದಾನದ ಪ್ರಶ್ನೆ ಬಂದಾಗ ಭಾರತದಲ್ಲಿನ ಅಸ್ಪೃಶ್ಯರ ಸಂಖ್ಯೆಯನ್ನು ಒಪ್ಪಲು ಸ್ವತಃ ಇತರರು ನಿರಾಕರಿಸಿದರು. ಪ್ರಾತಿನಿಧ್ಯವನ್ನು ಅಸ್ಪೃಶ್ಯರಿಗೆ ಬಿಟ್ಟು ಕೊಡಬೇಕಾಗಿ ಬರುತ್ತದೆ ಎಂಬುದು ಅದರ ಹಿಂದಿನ ತಂತ್ರ. 1951ರ ಜನಗಣತಿಯ ಪ್ರಕಾರ ನಿಮ್ನ ಜಾತಿಯವರು 513 ಲಕ್ಷ. ಇದರಲ್ಲಿ 114 ಲಕ್ಷ ಮಂದಿ ಉತ್ತರ ಭಾರತದಲ್ಲಿ ವಾಸಿಸುತ್ತಾರೆ.

ಹಿಂದುಗಳು ಎಂದೂ ಗುಲಾಮಗಿರಿಯನ್ನು ಎತ್ತಿ ಹಿಡಿದಿಲ್ಲ, ಏನೇ ಆದರೂ ಅಸ್ಪೃಶ್ಯತೆಯು ಗುಲಾಮಗಿರಿಗಿಂತಲೂ ಹೀನವಾದದಲ್ಲ ಎಂಬ ನಂಬಿಕೆ ಭಾರತದಲ್ಲಿ ಬೇರೂರಿದೆ. ಆದರೆ ಸಮಾಜದ ಕೆಲವು ಸಾಮಾನ್ಯರನ್ನು ಗಾಯಕರು, ಸಂಗೀತಗಾರರು ವಿವಿಧ ರೀತಿಯ ಕಲಾಕಾರರು, ದೈಹಿಕ ಪಟುಗಳಾಗಿ ತರಬೇತಿ ನೀಡಿ ಗುಲಾಮಗಿರಿಯಲ್ಲಿ ಅಡಕಗೊಳಿಸಲಾಗಿತ್ತು. ಗುಲಾಮನಿಗೆ ಭೂಮಿಯನ್ನು ಕಂದಾಯಕ್ಕೆ ಕೊಡಲಾಗುತ್ತಿತ್ತು. ಕೈಗಾರಿಕೆಯ ಕ್ಷೇತ್ರದಲ್ಲಿಯೂ ಹೀಗೆಯೇ ಇತ್ತು. ಯಜಮಾನರು ಗುಲಾಮನಿಗೆ ಒಂದು ಬ್ಯಾಂಕನ್ನು ಅಥವಾ ಹಡಗನ್ನು ಪರಭಾರೆ ಮಾಡಬಹುದಿತ್ತು. ಗುಲಾಮನು ಸಂಪಾದಿಸುತ್ತಿದ್ದ ಹಣವು ಕಾನೂನು ರೀತ್ಯಾ ಅವನ ಖಾಸಗಿ ಗಂಟೆ ಆಗುತ್ತಿತ್ತು. ಯಜಮಾನನ ಜೊತೆ ವ್ಯವಹಾರಗಳಲ್ಲಿ ಸಂಬಂಧ ಹೊಂದಬಹುದಾಗಿತ್ತು. ಬಾರೋ ಅವರ 'ರೋಮ್ ಚಕ್ರಾಧಿಪತ್ಯದಲ್ಲಿ ಗುಲಾಮಗಿರಿ' ಎಂಬ ಪುಸ್ತಕದಲ್ಲಿ ಇವೆಲ್ಲವೂ ದಾಖಲಾಗಿದೆ. ಯುದ್ಧದಲ್ಲಿ ಸೆರೆಸಿಕ್ಕವರು ಪ್ರಭುತ್ವದ ಆಸ್ತಿಯಾಗಿ ಗುಲಾಮರು ಎನಿಸಿಕೊಳ್ಳುತ್ತಿದ್ದರು. ಸಾರ್ವಜನಿಕ ಗುಲಾಮನೆಂದರೆ ರಾಜ್ಯ ಪ್ರಭುತ್ವದಿಂದ ಬೇರೆ ಬೇರೆ ಅಧಿಕಾರ ಸ್ಥಾನಗಳಿಗೆ ನೇಮಿಸಲ್ಪಟ್ಟ ಗುಲಾಮ ಎಂಬ ಅರ್ಥವೂ ಇತ್ತು. ಗುಲಾಮರನ್ನು ಸೈನ್ಯಕ್ಕೆ ಭರ್ತಿ ಮಾಡಿ ಯುದ್ಧ ಅವಕಾಶವನ್ನು ನೀಡುತ್ತಿರಲಿಲ್ಲ. ಬಹುಶಃ ಇದು ಅಪಾಯವಾಗಿ ಕಂಡಿರಬಹುದು.

ಅಮೇರಿಕಾ ಸಂವಿಧಾನದಲ್ಲಿ ಕಾನೂನು ರೀತ್ಯಾ ಗುಲಾಮರಾಗಿದ್ದ ಕಾಲದಲ್ಲಿ, ಕ್ರಾಂತಿಯ ಸಮಯದಲ್ಲಿ ಕರಿಯರು, ಬಿಳಿಯರು ಒಟ್ಟಿಗೆ ಕಾದಾಡುತ್ತಿದ್ದರು. ಒಟ್ಟಿಗೆ

ಊಟ ಮಾಡುತ್ತಿದ್ದರು. ಗುಲಾಮರ ದುಡಿಮೆಯನ್ನು ಎಲ್ಲ ರೀತಿಯ ಕೆಲಸಗಳಿಗೂ ಬಳಸಿಕೊಳ್ಳಲಾಗುತ್ತಿತ್ತು. ನೀಗ್ರೋ ಗುಲಾಮರಲ್ಲಿ ಸ್ವಲ್ಪ ಹೆಚ್ಚು ಬುದ್ಧಿವಂತರಾಗಿದ್ದವರಿಗೆ ಕುಶಲಕರ್ಮಿಗಳಾಗಲು ತರಬೇತಿ ನೀಡಲಾಗುತ್ತಿತ್ತು. ಭೂಮಿ ಕೆಲಸ ಮಾಡುವ ಗುಲಾಮನಿಗಿಂತ ಮಾರುಕಟ್ಟೆಯಲ್ಲಿ ಕುಶಲಕರ್ಮಿಯಾಗಿದ್ದ ಗುಲಾಮನಿಗೆ ಹೆಚ್ಚು ವೇತನ ಸಿಗುತ್ತಿತ್ತು. ಆದರೂ ಅಮೆರಿಕ ಸಂಯುಕ್ತ ಸಂಸ್ಥಾನದ ನಿಜವಾದ ಕಾನೂನು ಬದ್ಧ ನೈತಿಕ ನಾಗರಿಕ ಮಾಲೀಕರೆಂದರೆ ಬಿಳಿಯ ಜನವೆಂದೆ ಭಾವಿಸಲಾಗಿತ್ತು. ಕೋಪರ್ ನಿಕಸ್ ಮತ್ತು ಗೆಲಿಲಿಯೋಗಳಂತ ಬಿಳಿಯರು ಅಧ್ಯಯನ ಮಾಡಲಾರಂಭಿಸಿದ ದಿನದಿಂದಲೇ ಈ ಭಾವನೆ ಪ್ರಾರಂಭವಾಗಿತ್ತು. ಬಿಳಿಯನಾದ ಕೊಲಂಬಸ್ ಈ ಖಂಡವನ್ನು ಕಂಡು ಹಿಡಿದಿರುವುದರಿಂದ ಬಿಳಿಯರೇ ಅದರ ವಾರಸುದಾರರು. ಕರಿಯರಿಗೆ ನೀವು ಬೆಂಬಲ ನೀಡಿ ಬಿಳಿಯರ ಕೆಲಸಗಳನ್ನು ತಡೆಹಿಡಿಯಕೂಡದು ಎಂಬುದಾಗಿ ಮನವಿಯನ್ನು ನೀಡಲಾಗಿತ್ತು. ಭಾರತದ ಅಸ್ಪೃಶ್ಯರ ಸ್ಥಾನಮಾನಗಳನ್ನು ರೋಮ್‌ನೊಂದಿಗೆ ಹೋಲಿಸಿದರೆ ಗುಲಾಮರು ಮಾಡುತ್ತಿದ್ದ ಗ್ರಂಥಪಾಲಕ, ಉಕ್ತಲೇಖನ ಬರೆದುಕೊಳ್ಳುವ ಶೀಘ್ರ ಲಿಪಿಕಾರ ಇತ್ಯಾದಿ ಕೆಲಸಗಳಲ್ಲಿ ಭಾರತದ ಅಸ್ಪೃಶ್ಯರು ಎಷ್ಟು ಮಂದಿ ತೊಡಗಿಕೊಂಡಿದ್ದಾರೆ ಹಾಗೂ ಬೌದ್ಧಿಕ ಉದ್ಯೋಗಗಳಾದ ಅಲಂಕಾರಿಕ, ವ್ಯಾಕರಣಕಾರ, ತತ್ವಜ್ಞಾನಿ, ಬೋಧಕ, ವೈದ್ಯ, ಕಲಾವಿದ ವೃತ್ತಿಗಳಲ್ಲಿ ತೊಡಗಿರುವವರ ಸಂಖ್ಯೆ ಎಷ್ಟು ಎಂಬ ಪ್ರಶ್ನೆಗಳಿಗೆ ಭಾರತೀಯ ಹಿಂದೂ ಉತ್ತರ ಕೊಡಲಾರ. ಅಸ್ಪೃಶ್ಯತೆಯನ್ನ ಸಮರ್ಥಿಸಲು ಹಿಂದುಗಳು ಹಾಕಿಕೊಳ್ಳುವ ಮಾರ್ಗಗಳು ಎಷ್ಟು ಶುಷ್ಕವಾಗಿವೆ ಎಂಬುದನ್ನು ಇದು ತೋರುತ್ತದೆ. ಒಬ್ಬ ವ್ಯಕ್ತಿಯ ಅಥವಾ ವರ್ಗದ ಜೀವನ ಮರಣಗಳ ಶಕ್ತಿಯನ್ನು ಇನ್ನೊಬ್ಬ ವ್ಯಕ್ತಿ ಅಥವಾ ವರ್ಗವು ಕಾನೂನಿನಿಂದ ಪ್ರತಿಬಿಂಬಿಸುವುದು ಅಸಾಧುವಾದುದ್ದು. ಅಸ್ಪೃಶ್ಯತೆ ಮತ್ತು ಗುಲಾಮಗಿರಿಯ ನಡುವೆ ಕೆಲವು ಸೂಕ್ಷ್ಮವಾದ ವ್ಯತ್ಯಾಸಗಳಿವೆ. ಅಸ್ಪೃಶ್ಯತೆ ಗುಲಾಮಗಿರಿಗಿಂತಲೂ ಹೀನವಾದ ಸ್ವಾತಂತ್ರ್ಯ ರಹಿತ ಸಾಮಾಜಿಕ ರಚನೆ. ಗುಲಾಮಗಿರಿಯು ಎಂದು ಕಡ್ಡಾಯವಾಗಿರಲಿಲ್ಲ ಆದರೆ ಅಸ್ಪೃಶ್ಯತೆಯು ಕಡ್ಡಾಯವಾದದ್ದು. ಗುಲಾಮನನ್ನಾಗಿ ಇರಿಸಿಕೊಳ್ಳಲು ಅನುಮತಿ ಅವಶ್ಯಕತೆ ಇದೆ ಹಾಗೆ ಅವನಿಗೆ ಇರಲು ಇಷ್ಟವಿಲ್ಲದಿದ್ದರೆ ಅವನ ಮೇಲೆ ಯಾವ ನಿರ್ಬಂಧವೂ ಇಲ್ಲ. ಆದರೆ ಅಸ್ಪೃಶ್ಯನಿಗೆ ಆಯ್ಕೆಯ ಪ್ರಶ್ನೆ ಇಲ್ಲ ಅವನು ಅಸ್ಪೃಶ್ಯನಾಗಿ ಒಮ್ಮೆ ಹುಟ್ಟಿದರೆ ಸಾಕು ಅಸ್ಪೃಶ್ಯನ ಎಲ್ಲಾ ದೌರ್ಬಲ್ಯಗಳಿಗೂ ಅವರು ತುತ್ತಾಗಬೇಕು. ಒಮ್ಮೆ ಗುಲಾಮನಾದರೆ ಸದಾಕಾಲಕ್ಕೂ ಗುಲಾಮ ಎಂಬುದು ಗುಲಾಮನ ವಿಧಿಯಾಗಿರಲಿಲ್ಲ ಆದರೆ ಅಸ್ಪೃಶ್ಯರು ಪಾರಾಗಲು ಸಾಧ್ಯವೇ ಇಲ್ಲ. ಗುಲಾಮನಿಗೆ ಸ್ವಾತಂತ್ರ್ಯಕ್ಕಾಗಿ ಹೋರಾಡುವಲ್ಲಿ ಗುಲಾಮತನದ ಪ್ರಜ್ಞಾಪೂರ್ವಕವಾದ ಅರಿವು ಮೊದಲ ಬಹಳ ಮುಖ್ಯವಾದ ಹೆಜ್ಜೆ. ಆದರೆ ಅಸ್ಪೃಶ್ಯ ಒಬ್ಬನಿಗೆ ನೀನೊಬ್ಬ ಸ್ವತಂತ್ರ ನಾಗರಿಕ ನಿನಗೆ ಎಲ್ಲಾ ಹಕ್ಕುಗಳು ಇವೆ ಎಂದು ಹೇಳುತ್ತಲೇ ಅವನನ್ನು ಹಗ್ಗದಿಂದ

ಕಟ್ಟಿ ಹಾಕುವುದು. ನನ್ನ ಪರಾಕಾಷ್ಠೆ ಮುಟ್ಟಲು ಅವನಿಗೆ ಯಾವ ಅವಕಾಶಗಳು ಇಲ್ಲದಂತೆ ಮಾಡುವುದು ಕ್ರೂರವಾದ ಮೋಸ. ಅವರಿಗೆ ಅರಿವಿಲ್ಲದಂತೆ ಅಸ್ಪೃಶ್ಯರನ್ನ ಬಂದಿಸಿಡುವ ಕ್ರಮ ಇದು. ಅಪ್ರಜ್ಞಾಪೂರ್ವಕವಾದುದರಿಂದ ಅದು ಬಹುಕಾಲ ಬಾಳುವಂತದು. ಗುಲಾಮಗಿರಿ ಮತ್ತು ಅಸ್ಪೃಶ್ಯತೆಯಲ್ಲಿ ಹೀನವಾದದ್ದು ಅಸ್ಪೃಶ್ಯತೆ ಎಂಬುದಕ್ಕೆ ಯಾವ ಸಂಶಯವೂ ಇಲ್ಲ. ಇವೆರಡೂ ಕೂಡ ಸ್ವತಂತ್ರದಿಂದ ಕೂಡಿದ ಸಾಮಾಜಿಕ ವ್ಯವಸ್ಥೆ ಅಲ್ಲ. ನಮಗೆ ಗುರುತಿಸುವುದಕ್ಕೆ ಇರುವ ಪರೀಕ್ಷಾ ವಿಧಾನ ವಿದ್ಯಾಭ್ಯಾಸ, ಶೀಲತೆ ಇವು ಅಸ್ಪೃಶ್ಯರಿಗಿಂತಲೂ ಗುಲಾಮರಲ್ಲಿ ನೂರು ಪಟ್ಟು ಉತ್ತಮವಾಗಿದೆ. ಅಸ್ಪೃಶ್ಯತೆಯಲ್ಲಿರುವಂತೆ ವ್ಯಕ್ತಿಯನ್ನು ನಜ್ಜು-ಗುಜ್ಜುಗೊಳಿಸುವಂತಹ ಅಥವಾ ವೈಯಕ್ತಿಕ ಬೆಳವಣಿಗೆಯನ್ನು ನಿರಾಕರಿಸುವಂತಹ ಯಾವ ಲಕ್ಷಣವೂ ಗುಲಾಮಗಿರಿಯಲ್ಲಿಲ್ಲ. ಗುಲಾಮಗಿರಿಗಿಂತಲೂ ಅಸ್ಪೃಶ್ಯತೆಗೆ ಮೇಲು ಎಂಬುದು ದುಡುಕಿನ ಮಾತಾಗುತ್ತದೆ ಎನ್ನುತ್ತಾರೆ ಅಂಬೇಡ್ಕರ್. ಗುಲಾಮನೊಬ್ಬನಿಗೆ ವಿವಿಧ ಕ್ಷೇತ್ರಗಳಲ್ಲಿ ತರಬೇತಿ ನೀಡಲು ಸಾಕಷ್ಟು ಖರ್ಚಾಗುತ್ತಿತ್ತು ಹಾಗೂ ಯಜಮಾನನಿಗೆ ಲಾಭದ ಆಕಾಂಕ್ಷೆ ಇರುತ್ತಲೇ ಇತ್ತು. ಗುಲಾಮನ ಆರೋಗ್ಯ ಮತ್ತು ಕ್ಷೇಮವನ್ನು ಧಣಿಯು ಎಚ್ಚರದಿಂದ ನೋಡಿಕೊಳ್ಳುತ್ತಿದ್ದ. ಕೆಲಸ ಇಲ್ಲದಿದ್ದಾಗಿಯೂ ಊಟವನ್ನು ಒದಗಿಸುವ ಜವಾಬ್ದಾರಿಯು ಧಣಿಯದಾಗಿರುತ್ತಿತ್ತು. ಅಸ್ಪೃಶ್ಯನಿಗೆ ನಾಗರಿಕತೆಯ ಉನ್ನತ ಕಲಾ ಸ್ಥಾನಗಳಿಗೆ ಪ್ರವೇಶವಿಲ್ಲ ಮತ್ತು ಸಾಂಸ್ಕೃತಿಕ ಜೀವನದೊಳಗೆ ನುಸುಳಲು ದಾರಿ ಇಲ್ಲ. ಅವನಿಗೆ ಸಂಪಾದನೆಯ ಭರವಸೆಯನ್ನು ನೀಡುವುದಿಲ್ಲ, ಅವನ ಆರೋಗ್ಯವು ಯಾರ ಕಾಳಜಿಯನ್ನು ಬಯಸುವಂತಿಲ್ಲ, ಅವನ ಮರಣವು ಪೀಡೆ ಕಳೆದಂತೆ ಎಂಬ ಭಾವನೆ ಉಂಟುಮಾಡಿದೆ. ಗಾದೆ ಮಾತೊಂದು ಇದನ್ನು ಸಮರ್ಥಿಸುತ್ತದೆ 'ಮಾದಿಗ ಸತ್ತ ಮೈಲಿಗೆಯ ಭಯ ಮಾಯವಾಯಿತು'. ಗುಲಾಮರಿಗಿಂತಲೂ ಭಿನ್ನವಾದ ರೀತಿಯಲ್ಲಿ ಅಸ್ಪೃಶ್ಯರನ್ನು ಕಾಣಲಾಗುತ್ತಿತ್ತು. ಅಸ್ಪೃಶ್ಯರು ಹಿಂದೂಗಳ ಸ್ವತ್ತು ಆದರೆ ಬೇರೆ ಭಾರವನ್ನು ಹೊರಬೇಕೆಂದರೆ ಮಾಲೀಕತ್ವವನ್ನು ಕೊಡವಿಕೊಂಡು ಬಿಡುತ್ತಾರೆ. ಸಾಮಾಜಿಕ ವ್ಯವಸ್ಥೆಯ ಯಾವ ಅನುಕೂಲಗಳನ್ನು ಅಸ್ಪೃಶ್ಯರು ಕೇಳಿ ಪಡೆಯುವಂತಿಲ್ಲ ಆದರೆ ಎಲ್ಲ ಪ್ರತಿಕೂಲಗಳನ್ನು ಅವರು ಸಹಿಸಿಕೊಳ್ಳಬೇಕು.

ಹಿಂದೂ ಹಳ್ಳಿಯೂ ಎಂದೂ ಸಮಾಜ ವ್ಯವಸ್ಥೆಯ ಕ್ರಿಯಾಯುಕ್ತವಾದ ಒಂದು ಕಾರ್ಖಾನೆ ಇದ್ದಂತೆ. ಭಾರತದ ಹಳ್ಳಿಯಲ್ಲಿ ಒಂದು ಸ್ಪೃಶ್ಯರು ಮತ್ತೊಂದು ಅಸ್ಪೃಶ್ಯರು. ಸ್ಪೃಶ್ಯರು ಬಹುಮಂದಿ ಆದರೆ ಅಸ್ಪೃಶ್ಯರು ಅಲ್ಪ ಸಂಖ್ಯಾತ ಸಮುದಾಯ. ಸ್ಪೃಶ್ಯರು ಹಳ್ಳಿಯ ಒಳಗಡೆ ವಾಸವಾದರೆ ಅಸ್ಪೃಶ್ಯರು ಹಳ್ಳಿಯಿಂದ ಪ್ರತ್ಯೇಕವಾಗಿ ಗುಡಿಸಲುಗಳಲ್ಲಿ ವಾಸಿಸುತ್ತಾರೆ. ಒಂದು ಆಳುವ ಜನಾಂಗವಾದರೆ ಇನ್ನೊಂದು ಅಧೀನಕ್ಕೆ ಒಳ ಪಟ್ಟ ಜನಾಂಗ. ಒಂದು ಆರ್ಥಿಕವಾಗಿ ಬಲಾಢ್ಯವಾದ ಜನಾಂಗವಾದರೆ

ಮತ್ತೊಂದು ಆರ್ಥಿಕವಾಗಿ ಪರಾಧೀನರಾದ ಬಡ ಸಮುದಾಯ. ಅಸ್ಪೃಶ್ಯರ ವಾಸದ ಪ್ರದೇಶವು ಹಳ್ಳಿಯ ದಕ್ಷಿಣ ದಿಕ್ಕಿನಲ್ಲಿರಬೇಕು ಏಕೆಂದರೆ ನಾಲ್ಕು ದಿಕ್ಕುಗಳಲ್ಲಿ ದಕ್ಷಿಣವು ಅತ್ಯಂತ ಅಮಂಗಲವಾದದು. ಅಸ್ಪೃಶ್ಯನು ತನ್ನ ನೆರಳಿನಿಂದ ಮಾಲಿನ್ಯವನ್ನು ಉಂಟುಮಾಡಬಾರದು. ಅಸ್ಪೃಶ್ಯರ ಗುಂಪಿಗೆ ಸೇರಿದವನು ಭೂಮಿ, ಧನ ಮತ್ತು ಇತರ ಸಂಪತ್ತನ್ನು ಪಡೆದುಕೊಳ್ಳುವುದು ಒಂದು ಅಪರಾಧ. ಉತ್ತಮ ಸುಸಜ್ಜಿತವಾಗಿರುವಂತಹ ಮನೆಯನ್ನು ಕಟ್ಟಿಕೊಳ್ಳುವುದು ಕೂಡ ಅಪರಾಧ. ಶುಭ ವಸ್ತ್ರಗಳನ್ನು ತೊಡುವುದು, ಪಾದರಕ್ಷೆ ಹಾಕಿಕೊಳ್ಳುವುದು, ಗಡಿಯಾರ ಅಥವಾ ಯಾವುದೇ ಚಿನ್ನದ ಆಭರಣಗಳಿಂದ ಅಲಂಕರಿಸಿಕೊಳ್ಳುವುದು ಅಪರಾಧ. ತನ್ನ ಸಮುದಾಯದ ಒಬ್ಬನಿಗೆ ಸೊಗಸಾದ ಹೆಸರನ್ನು ಇಡುವುದು ಅಪರಾಧ. ಮೇಲ್ ವರ್ಗದವರ ಸಮ್ಮುಖದಲ್ಲಿ ಕುರ್ಚಿಯ ಮೇಲೆ ಕೂರುವುದು ಅಪರಾಧ. ಹಳ್ಳಿಯಲ್ಲಿ ಕುದುರೆ ಮೇಲೆ ಕುಳಿತು ಹೋಗುವುದು ಹಾಗೆ ಪಲ್ಲಕ್ಕಿಯನ್ನು ಬಳಸುವುದು ಕೂಡ ಅಪರಾಧ. ಅಸ್ಪೃಶ್ಯರ ಮೆರವಣಿಗೆ ಒಂದನ್ನು ಹಳ್ಳಿಯ ಮುಖಾಂತರ ಕೊಂಡು ಹೋಗುವುದು ಅಪರಾಧ. ಹಿಂದೂ ಒಬ್ಬನಿಗೆ ಪ್ರಣಾಮ ಮಾಡದಿರುವುದು ಅಪರಾಧ ಸುಸಂಸ್ಕೃತವಾದ ಭಾಷೆಯೊಂದನ್ನು ಮಾತನಾಡುವುದು ಅಪರಾಧ. ಹಿಂದೂಗಳ ಉಪವಾಸ ಪುಣ್ಯ ದಿನದಂದು ಹಳ್ಳಿಗೆ ಆತನ ಪ್ರವೇಶ ನಿಷಿದ್ಧ. ಅಸ್ಪೃಶ್ಯನ್ನೊಬ್ಬ ಮೇಲ್ವರ್ಗದವರಂತೆ ಬಹಿರಂಗ ಗುರುತನ್ನು ಧರಿಸುವುದು ಅಪರಾಧ. ಸ್ಪೃಶ್ಯರ ಮನೆಯಲ್ಲಿ ಜರುಗುವ ಎಲ್ಲ ಘಟನೆಗಳ ಮಾಹಿತಿಯನ್ನು ಅವರ ಸಂಬಂಧಿಕರಿಗೆ ನೆಂಟರಿಷ್ಟರಿಗೆ ಮುಟ್ಟಿಸಬೇಕು. ಸಾಮೂಹಿಕ ಉತ್ಸವಗಳನ್ನು ಆಚರಿಸುವಲ್ಲಿ ಇಡೀ ಗ್ರಾಮ ಸಮುದಾಯವು ನಿರತವಾಗಿದ್ದಾಗ ಅಸ್ಪೃಶ್ಯರು ಕೀಳು ಕೆಲಸವನ್ನು ನಿರ್ವಹಿಸಬೇಕು.

ಮೇಲ್ ವರ್ಗದವರು ಅಸ್ಪೃಶ್ಯರಿಗಿಂತ ತಾನು ಉಚ್ಚ ಸ್ಥಾನದಲ್ಲಿರುವ ವ್ಯಕ್ತಿ ಎಂಬ ಭಾವನೆಯನ್ನು ಇರಿಸಿಕೊಂಡಿರುವುದು ಇದಕ್ಕೆಲ್ಲಾ ಕಾರಣ. ಅಸ್ಪೃಶ್ಯನು ಇದರಲ್ಲಿ ಯಾವುದನ್ನು ಉಲ್ಲಂಘಿಸಿದರೂ ಇಡೀ ಸಮುದಾಯಕ್ಕೆ ಶಿಕ್ಷೆ ಖಚಿತ. ಅಸ್ಪೃಶ್ಯರು ಬಹುತೇಕ ಭೂರಹಿತ ಕಾರ್ಮಿಕರಾಗಿ ಉಳಿಯಬೇಕಾಗಿತ್ತು. ಸರಿಯಾದ ಕೂಲಿಯನ್ನು ಕೇಳುವಂತಿಲ್ಲ, ಕೂಲಿಯನ್ನು ಹಣದ ರೂಪದಲ್ಲಿ ಇಲ್ಲವೇ ದವಸಧಾನ್ಯದ ರೂಪದಲ್ಲಿ ನೀಡಲಾಗುತ್ತದೆ. ಬೇಸಾಯದ ನಂತರದಲ್ಲಿ ಅಸ್ಪೃಶ್ಯರಿಗೆ ಉದ್ಯೋಗವಿರದೆ ಅವರ ಜೀವನೋಪಾಯಕ್ಕೆ ದಾರಿ ಇಲ್ಲದಂತಾಗುತ್ತಿತ್ತು. ವರಮಾನದ ಎಲ್ಲ ಮೂಲಗಳು ಸಹಜವಾಗಿ ಅನಿಶ್ಚಿತವಾದವು ಮತ್ತು ಕ್ಷಣಿಕವಾದವು. ಯಜಮಾನ ಮತ್ತು ಆಳಿನ ಸಂಬಂಧದ ವ್ಯವಹಾರದಂತಿದೆ. ನೀಚರಾಗಿ ಜನ್ಮ ತಾಳಿದವರು ನೆಲೆಗೊಳಿಸಿರುವ ವ್ಯವಸ್ಥೆಯಲ್ಲಿ ಕರ್ಮ ಅಥವಾ ಹಣೆಬರಹದ ತತ್ವದ ಆಧಾರವನ್ನು ಒಪ್ಪಿಕೊಳ್ಳಲೇ ಬೇಕೆಂದು ಒತ್ತಾಯಿಸಲಾಗುತ್ತದೆ. ಭಾರತದ ಹಳ್ಳಿಯೊಂದರ

ಅಂತರಂಗದ ಜೀವನ ಚಿತ್ರಣವಿದು. ಪ್ರಜಾಪ್ರಭುತ್ವಕ್ಕೆ ಸ್ಥಾನವಿಲ್ಲ. ಹಳ್ಳಿ ಒಂದು ಗಣರಾಜ್ಯದ ಕಲ್ಪನೆಯನ್ನು ಸಂಪೂರ್ಣವಾಗಿ ನಿರಾಕರಿಸುತ್ತದೆ ಸ್ವತಃ ಅಸ್ಪೃಶ್ಯರು ಈ ಗಣರಾಜ್ಯಕ್ಕೆ ಬಾಹಿರರಾದವರು ಹಾಗಾಗಿ ಅವರಿಗೆ ಹಕ್ಕುಗಳಿಲ್ಲ.

ಸಾಮಾಜಿಕ ಅಸಮಾನತೆ ಎನ್ನುವುದು ಹಿಂದೂ ಸಮಾಜಕ್ಕೆ ಸೀಮಿತವಾಗಿರುವುದೇನಲ್ಲ ರೋಮನ್ ಸಾಮ್ರಾಜ್ಯದಲ್ಲಿನ ಗುಲಾಮಗಿರಿ, ಇಂಗ್ಲೆಂಡಿನ ಜೀತ ಪದ್ಧತಿ, ಯಹೂದಿಗಳ ದಾಸ್ಯ ನೀಗ್ರೋ ಗುಲಾಮಗಿರಿ ಹೀಗೆ ಬೇರೆ ಬೇರೆ ದೇಶಗಳ ಪ್ರಾಚೀನ ಮತ್ತು ಆಧುನಿಕ ಕಾಲಗಳಲ್ಲಿನ ಹೀನ ವರ್ಗಗಳನ್ನು ಭಾರತದೊಂದಿಗೆ ಹೋಲಿಸಿ ನೋಡುವುದು ಕುತೂಹಲಕಾರಿಯಾದಂತಾಗುತ್ತದೆ. ಶ್ರೀಮಂತರು ಆಳುವ ವರ್ಗದವರಾಗಿದ್ದರು ಉಳಿದವರು ಅಡಿಯಾಳಾಗಿದ್ದರು ಯುದ್ಧದಲ್ಲಿ ನಿರ್ನಾಮರಾಗಿ ಶರಣು ಬಂದವರು ಆಶ್ರಿತರೆನಿಸಿಕೊಳ್ಳುತ್ತಿದ್ದರು. ಖಾಸಗಿ ಒಡೆಯರ ಅಡಿಯಾಳಾಗಲು ಒಪ್ಪದ ಸ್ವತಂತ್ರ ಮನೋವೃತ್ತಿಯವರು ರಾಜ್ಯದ ರಕ್ಷಣೆಗೊಳಪಟ್ಟು ಸಾಮಾನ್ಯರಾಗುತ್ತಿದ್ದರು. ಇನ್ನು ಕೊನೆಯದಾಗಿ ಗುಲಾಮರು ಒಬ್ಬ ಜಮೀನ್ದಾರ ಸಾವಿರಾರು ಗುಲಾಮರಿಗೆ ಒಡೆಯನಾಗಿರುತ್ತಿದ್ದ ಗುಲಾಮರು ಕಾನೂನಿನ ಕಣ್ಣಿನಲ್ಲಿ ಮನುಷ್ಯರಾಗಿ ಇರಲಿಲ್ಲ.

ಇಂಗ್ಲೀಷ್ ಸಮಾಜದಲ್ಲೂ ದಾಸ್ಯದಲ್ಲಿದ್ದ ವರ್ಗಗಳಿದ್ದವು. ಕುಲೀನ ವರ್ಗ, ಉಂಬಳಿದಾರ, ಅರೆ ಸ್ವತಂತ್ರರು, ಗೇಣಿ ಒಡೆಯರು, ಉಪ ಗೇಣಿ ಒಡೆಯರು, ಸ್ವತಂತ್ರರು, ಗೇಣಿದಾರರು, ಜೀತದಾಳುಗಳು ಇವೆಲ್ಲವೂ ಜನಾಂಗ ಮತ್ತು ಧರ್ಮದ ಪಾಲಿಲ್ಲದ ದಾಸ್ಯಕ್ಕೆ ನಿದರ್ಶನಗಳು. ಧರ್ಮ ಅಥವಾ ಜನಾಂಗ ದಾಸ್ಯಕ್ಕೆ ಕಾರಣವಾಗಿರುವ ಉದಾಹರಣೆಗಳಿಗೂ ಇತಿಹಾಸದಲ್ಲಿ ಕೊರತೆಯಿಲ್ಲ ಉದಾಹರಣೆಗೆ ಯಹೂದಿ ಜನಾಂಗ. ಯಹೂದಿ ಜನಾಂಗ ಯೇಸು ಕ್ರಿಸ್ತನ ಸಾವಿಗೆ ಕಾರಣವಾಯಿತು ಎಂಬ ನಂಬಿಕೆಯ ಕಾರಣದಿಂದಾಗಿ ದಂಡನೆಗಳ ಕೊಡುತ್ತಾ ಬಂದಿದೆ. ಯುರೋಪಿನ ಎಲ್ಲ ಪಟ್ಟಣಗಳಲ್ಲಿ ಯಹೂದಿಗಳು ಪಟ್ಟಣದ ಒಂದು ಭಾಗದಲ್ಲಿ ಪ್ರತ್ಯೇಕವಾಗಿ ಬದುಕಬೇಕಾಗಿತ್ತು. ಅಸ್ಪೃಶ್ಯರ ಸ್ಥಿತಿಗೆ ಹೋಲುವ ಇನ್ನೊಂದು ಸ್ಥಿತಿ ಕ್ಯಾಥೋಲಿಕ್ ಸಮುದಾಯದ್ದು. ರೋಮನ್ ಕ್ಯಾಥೋಲಿಕರಿಗೆ ಚುನಾವಣೆಯಲ್ಲಿ ಭಾಗವಹಿಸುವ ಅವಕಾಶ ನಿರಾಕರಿಸಲಾಗಿತ್ತು. ಆಸ್ಪತ್ರೆಗಳಲ್ಲಿ ಅನಾಥಾಲಯಗಳಲ್ಲಿ ಸಾರ್ವಜನಿಕ ಸಂಸ್ಥೆಗಳಲ್ಲಿ ರೋಮನ್ ಕ್ಯಾಥೋಲಿಕ್ಕರ ಸೇವೆಯನ್ನು ನಿರಾಕರಿಸಲಾಗಿತ್ತು.

ಯುರೋಪಿನ ಸ್ವತಂತ್ರ ನಾಗರಿಕ ಜನರಿಗೆ ಗುಲಾಮರನ್ನು ಪೋಷಿಸಿಕೊಡುವ ದುರ್ಗತಿ ಒದಗಿದ್ದು ಆಫ್ರಿಕಾ ಖಂಡ ಖಂಡಕ್ಕೆ. ಬ್ರಿಟನ್ ಹಾಗೂ ಅಮೆರಿಕಕ್ಕೆ ಕಪ್ಪು ಗುಲಾಮರನ್ನು ಕರೆತರುವ ಮೊದಲೇ ಅರಬರು ಏಷ್ಯಾದಲ್ಲಿ ಅವರನ್ನು ಗುಲಾಮರನ್ನಾಗಿ ಮಾಡಿಕೊಂಡಿದ್ದರು. ಗುಲಾಮರನ್ನು ಆಮದು ಮಾಡಿಕೊಳ್ಳುವುದಕ್ಕೆ

ಜಗತ್ತಿನ ಬಹುತೇಕ ದೇಶಗಳು ತೀವ್ರವಾದ ಪೈಪೋಟಿಯನ್ನು ನಡೆಸಿದರು. ನೀಗ್ರೋ ಗುಲಾಮರ ಕಳ್ಳತನದಲ್ಲಿ ಶಾಮಿಲಾದ ತಮ್ಮ ಪ್ರಜೆಯನ್ನು ಇದು ಅವರ ವೈಯಕ್ತಿಕ ಕಾರ್ಯವಲ್ಲ ಸರ್ಕಾರದ ಅಂಗೀಕಾರ ಪಡೆದ ಸಾರ್ವಜನಿಕ ಉದ್ಯೋಗ ಎಂಬಂತೆ ಸರ್ಕಾರಗಳು ಸಮರ್ಥಿಸಿಕೊಂಡವು.

ಬೇರೆ ದೇಶಗಳಲ್ಲಿ ವರ್ಗ ರಚನೆ ಉಂಟಾಗಿದ್ದು ಆರ್ಥಿಕ ಮತ್ತು ಸಾಮಾಜಿಕ ಪ್ರೇರಣೆ ಗಳಿಂದಾಗಿ. ಗುಲಾಮಗಿರಿಗಾಗಲಿ, ಗೇಣಿ ಪದ್ಧತಿಗಾಗಲಿ ಯಾವುದೇ ಧಾರ್ಮಿಕ ತಳಹದಿ ಇರಲಿಲ್ಲ. ಅಸ್ಪೃಶ್ಯತೆ ಆರ್ಥಿಕ ಅನುಕೂಲಗಳನ್ನು ಒದಗಿಸಿ ಕೊಡಬಲ್ಲದು ಆದರೆ ಅದು ಮೂಲತಃ ಧರ್ಮದ ಮೇಲೆ ನಿಂತಿರುವಂತದ್ದು. ಹಾಗಾಗಿ ಗುಲಾಮಗಿರಿ ಮತ್ತು ಗೇಣಿ ಪದ್ಧತಿ ಮಾಯವಾದವು ಆದರೆ ಅಸ್ಪೃಶ್ಯತೆ ಮಾಯವಾಗಲಿಲ್ಲ ಎಂಬುದನ್ನು ಗಮನಿಸಬಹುದು. ಧರ್ಮದ ಬೆಂಬಲದೊಂದಿಗೆ ಅಸ್ಪೃಶ್ಯತೆ ಜೀವಂತವಾಗಿರಲು ಸ್ಥಾಪಿತ ವ್ಯವಸ್ಥೆಯನ್ನು ಉಳಿಸಿಕೊಳ್ಳಲು ಒತ್ತಾಯಿಸುತ್ತದೆ. ಮನುವಿನ ನೀತಿ ಸೂತ್ರಗಳು ಅಂತಃ ಸಾಕ್ಷಿ ಇಲ್ಲದ ಧೋರಣೆ ಎಂದು ರೂಪಿಸಲ್ಪಟ್ಟಿದೆ ಎಂಬುದನ್ನು ನಿರಾಕರಿಸಲು ಸಾಧ್ಯವಿಲ್ಲ. ಅಸ್ಪೃಶ್ಯರ ದುರ್ಗತಿಗೆ ಹಿಂದೂ ಧರ್ಮ ಮತ್ತು ಉಪದೇಶವೇ ಮುಖ್ಯ ಕಾರಣ. ಅಸ್ಪೃಶ್ಯತೆಯೊಂದಿಗೆ ಹೋಲಿಸುವವರು ವಿರೋಧಾಭಾಸ ಇರುವುದನ್ನು ಗಮನಿಸಬೇಕು. ಗುಲಾಮ ಸ್ವತಂತ್ರನಾಗಿರದಿದ್ದರೂ ತನ್ನ ಸಾಮಾಜಿಕ ವ್ಯಕ್ತಿತ್ವ ಸುಧಾರಣೆಗೆ ಅಗತ್ಯವಾದ ಸ್ವಾತಂತ್ರ್ಯ ಪಡೆದಿದ್ದ. ಆದರೆ ಒಬ್ಬ ಅಸ್ಪೃಶ್ಯ ಸೃಷ್ಟಿಯ ಕಾನೂನಿನ ಪ್ರಕಾರ ಸ್ವತಂತ್ರ ಮನುಷ್ಯ ಆದರೆ ಸಾಮಾಜಿಕವಾಗಿ ತನ್ನ ವ್ಯಕ್ತಿತ್ವ ಸುಧಾರಣೆಗೆ ಆತನಿಗೆ ಯಾವುದೇ ಅವಕಾಶ ಇಲ್ಲ. ಕಾನೂನು ಪ್ರಕಾರ ನೀಚ ಎಂದು ಪರಿಗಣಿತನಾಗಿದ್ದ ರೋಮನ್ ಗುಲಾಮ ಸಾಮಾಜಿಕವಾಗಿ ಕೀಳು ಎಂದು ಪರಿಗಣಿತವಾಗದ ಹಾಗೆ ರಕ್ಷಿಸಿದ್ದು ರೋಮನ್ ಧರ್ಮ ಎಂಬುದರಲ್ಲಿ ಅನುಮಾನವಿಲ್ಲ. ರೋಮನ್ ಧರ್ಮ ಗುಲಾಮನಿಗೆ ಎಂದು ವಿರುದ್ಧವಾಗಿರಲಿಲ್ಲ ಆತನಿಗೆ ದೇವಾಲಯದ ಬಾಗಿಲುಗಳನ್ನು ಮುಚ್ಚಲಿಲ್ಲ, ಹಬ್ಬಗಳಿಗೆ ಬಹಿಷ್ಕರಿಸಲಿಲ್ಲ, ಕುಟುಂಬದ ದೇವರು ಗುಲಾಮರ ದೇವರು ಆಗಿರುತ್ತಿದ್ದ. ಮನುಷ್ಯ ಸಂಬಂಧಕ್ಕೆ ಸಹವರ್ತನೆಗೆ ಗುಲಾಮ ಅಯೋಗ್ಯನಲ್ಲವೆಂದು ರೋಮನ್ ಧರ್ಮ ಸಾರಿತು. ಗುಲಾಮ ಅಸ್ಪೃಶ್ಯನಾಗಿರಲಿಲ್ಲ ಎಂಬ ಕಾರಣಕ್ಕೆ ಒಡೆಯನಿಗೆ ಅವನನ್ನು ಮೇಲೆ ತರಲು ಸಾಧ್ಯವಾಯಿತು. ಗುಲಾಮನ ವ್ಯಕ್ತಿತ್ವವನ್ನು ರೋಮನ್ ಸಮಾಜ ರಕ್ಷಿಸಿತು. ಹಿಂದೂ ಸಮಾಜ ಅಸ್ಪೃಶ್ಯನ ವ್ಯಕ್ತಿತ್ವವನ್ನು ಗುರುತಿಸಲಿಲ್ಲ ಮನುಷ್ಯ ಸಂಬಂಧಕ್ಕೂ ಮಿತಿ ವ್ಯವಹಾರಗಳಿಗೂ ಅಯೋಗ್ಯನೆಂದು ಅಸ್ಪೃಶ್ಯ ಪರಿಗಣಿಸಲ್ಪಟ್ಟ. ಅಮೆರಿಕಾದಲ್ಲಿ ಗುಲಾಮಗಿರಿ ಇದ್ದ ಸಮಯದಲ್ಲಿ ಕ್ರಿಶ್ಚಿಯನ್ ಪಾದ್ರಿಗಳು ನೀಗ್ರೋ ಗುಲಾಮರನ್ನು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಳಿಸಲು ಸಿದ್ಧರಿರಲಿಲ್ಲ, ಕಾರಣ ಮತಾಂತರವಾದ ಮೇಲು ಒಬ್ಬ ಗುಲಾಮ ಗುಲಾಮನಾಗಿ ಉಳಿದರೆ ಅದು ಧರ್ಮಕ್ಕೆ

ಕಳಂಕ ಎಂಬ ಭಾವನೆ ಇತ್ತು. ಹಾಗಾಗಿ ಅವರು ಸಹಚರರೆ ಆಗಬೇಕೆಂದು ಅವರು ಭಾವಿಸಿದ್ದರು. ಕಾನೂನು ಮತ್ತು ಧರ್ಮ ಮನುಷ್ಯ ನಡವಳಿಕೆಯನ್ನು ರೂಪಿಸುವ ಎರಡು ಶಕ್ತಿಗಳು. ಈ ಎರಡು ಶಕ್ತಿಗಳಲ್ಲಿ ಕಾನೂನು ವೈಯಕ್ತಿಕ ವ್ಯಾಪ್ತಿ ಉಳ್ಳದ್ದು ಧರ್ಮ ವೈಯಕ್ತಿಕವನ್ನು ಮೀರಿದ ವ್ಯಾಪ್ತಿಯುಳ್ಳದ್ದು. ಕಾನೂನಿನ ವ್ಯಾಪ್ತಿ ವೈಯಕ್ತಿಕವಾದುದರಿಂದ ಅದು ಅನ್ಯಾಯ ಅಸಮಾನತೆಗಳನ್ನು ಹುಟ್ಟಿಸಬಲ್ಲದು. ಆದರೆ ಧರ್ಮದ ವ್ಯಾಪ್ತಿ ವ್ಯಕ್ತಿ ನಿರಪೇಕ್ಷವಾದ್ದರಿಂದ ಅದು ಪಕ್ಷಪಾತವಿಲ್ಲದ ಗುಣ ಪಡೆಯಲು ಸಾಧ್ಯ ಕಾನೂನು ಸೃಷ್ಟಿಸಿದ ಅಸಮಾನತೆಗಳನ್ನು ಸೋಲಿಸಬಲ್ಲದು. ಆದರೆ ಹಿಂದೂ ಧರ್ಮ ಅದಕ್ಕೆ ಅಪವಾದ ಅಸ್ಪೃಶ್ಯನನ್ನು ಮಾನವೀಯ ಘನತೆಯಿಂದ ತಗ್ಗಿಸಿ ಅಮಾನವೀಯಗೊಳಿಸಿದೆ ಅಷ್ಟೇ ಅಲ್ಲದೆ ಹೊರ ದಾರಿಗಳಿಗೆ ಅವಕಾಶವಿಲ್ಲದಂತೆ ಮಾಡಿದೆ.

ಒಟ್ಟಾರೆಯಾಗಿ ಸಾಮಾಜಿಕ ಪ್ರಜ್ಞೆ ಇಲ್ಲದಿರುವುದರಿಂದ ಹಿಂದುಗಳಿಗೆ ಅಸ್ಪೃಶ್ಯರ ಕಷ್ಟಕ್ಕೆ ಕಾರಣವಾದ ಅಸಮಾನತೆಯ ಅನ್ಯಾಯಗಳ ವಿರುದ್ಧ ಸಕಾರಣವಾದ ಸಿಟ್ಟು ಹುಟ್ಟುವುದಿಲ್ಲ. ಅಂತಃ ಸಾಕ್ಷಿಯ ಕೊರತೆಯಿಂದಾಗಿ ಹಿಂದುಗಳೆ ಅಸ್ಪೃಶ್ಯತೆಯ ನಿವಾರಣೆಯ ಹಾದಿಯಲ್ಲಿ ದೊಡ್ಡ ಕಾಲ್ತೊಡಕಾಗಿ ಪರಿಣಮಿಸುತ್ತಾರೆ. ಹಿಂದೂ ಸಮಾಜದಲ್ಲಿರುವ ಸೌಮ್ಯವಾದಿ ಗುಂಪೊಂದು ಅಸ್ಪೃಶ್ಯತೆ ಮತ್ತು ಜಾತಿ ಪದ್ಧತಿಗಳು ಪ್ರತ್ಯೇಕವಾದದ್ದು ಎಂದು ನಂಬುತ್ತದೆ. ಜಾತಿ ಪದ್ಧತಿಯನ್ನು ವಿರೋಧಿಸದೆ ಅಸ್ಪೃಶ್ಯತೆ ಯನ್ನು ನಿವಾರಿಸಲು ಸಾಧ್ಯ ಎಂದು ವಾದಿಸುತ್ತಾರೆ. ಹಿಂದೂವಿನ ರಾಜಕೀಯ ಬುದ್ಧಿ ಇದಕ್ಕೆ ಕಾರಣ. ಹಿಂದೂ ಒಬ್ಬ ತನ್ನನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ತಾನೆಷ್ಟು ಜನತಂತ್ರವಾಗಿ ತೋರಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದು ಯೋಚಿಸುತ್ತಾನೆ. ಒಬ್ಬ ಅಶಿಕ್ಷಿತ ಹಿಂದೂಗೆ ತಿಳಿದಿರುವ ವಿಚಾರ ಒಂದು ವಿಜಾತಿಯವರೊಂದಿಗೆ ಸಹ ಭೋಜನಕೂಡದು, ವಿಜಾತಿಯವರೊಂದಿಗೆ ವಿವಾಹ ಕೂಡದು ಹಾಗೂ ಕೆಲವು ಜನ ವರ್ಗಗಳನ್ನು ದೈಹಿಕವಾಗಿ ಸ್ಪರ್ಶಿಸಕೂಡದು ಎಂಬ ನಿಷೇಧ. ಮೊದಲ ಎರಡು ನಿಷೇಧಗಳಿಂದ ಜಾತಿ ಹುಟ್ಟುತ್ತದೆ ಆದರೆ ಮೂರನೇ ನಿಷೇಧದಿಂದ ಅಸ್ಪೃಶ್ಯತೆ ಹುಟ್ಟುತ್ತದೆ. ಇಲ್ಲಿ ಗಮನಿಸಬೇಕಾದ ಒಂದು ಅಂಶವೆಂದರೆ ಜಾತಿ ಪದ್ಧತಿ ಮತ್ತು ಅಸ್ಪೃಶ್ಯತೆ ಎರಡೂ ಒಂದೇ ತತ್ವದ ಮೇಲೆ ರೂಪಿತವಾದ ಎರಡು ವ್ಯವಸ್ಥೆಗಳು. ಅಸ್ಪೃಶ್ಯತೆ ಎಂಬುದು ಜಾತಿ ಪದ್ಧತಿಯ ವಿಸ್ತರಿತ ಭಾಗ. ಅಸ್ಪೃಶ್ಯತೆ ಎನ್ನುವುದು ಅಸ್ಪೃಶ್ಯರಿಗೆ ಒಂದು ದುರದೃಷ್ಟವಾದರೆ ಹಿಂದುಗಳಿಗೆ ಅದು ಅದೃಷ್ಟವೇ ಸರಿ. ಅಸ್ಪೃಶ್ಯತೆ ಮಾಯವಾಗುವುದು ಜಾತಿ ಪದ್ಧತಿ ಪೂರ್ಣ ನಿರ್ನಾಮವಾದಾಗ ಮಾತ್ರ. ಧಾರ್ಮಿಕ ಅನುಮೋದನೆ ದೊರೆತ ಯಾವುದೇ ವ್ಯವಸ್ಥೆಗೆ ಪವಿತ್ರ ಮತ್ತು ಸರ್ವಕಾಲೀನ ಗುಣಗಳು ಒದಗಿಬರುತ್ತದೆ ಹಾಗಾಗಿ ಜಾತಿ ಪದ್ಧತಿಯೇ ಮಾಯವಾಗುವಂತದ್ದಲ್ಲವಾದರೆ ಇನ್ನು ಅಸ್ಪೃಶ್ಯತೆ ಮಾಯವಾಗುವ ಬಗೆ ಹೇಗೆ? ಈ

ಸಂಘಟನೆಗೆ ಸಮಾಜದಿಂದ, ಧರ್ಮದಿಂದ ಅನುಮೋದನೆ ದೊರೆತಿದೆ. ಹೀಗೆ ಅಂಬೇಡ್ಕರ್ ಸಾಮಾಜಿಕ ಸಂಶೋಧನೆಗೊಳಪಡಬೇಕಾದ ಅಸ್ಪೃಶ್ಯತೆಯನ್ನು ವೈಜ್ಞಾನಿಕ ವಿಶ್ಲೇಷಣೆಗೆ ಒಳಪಡಿಸಿದ್ದಾರೆ.

## ಪರಾಮರ್ಶನ ಗ್ರಂಥಗಳು:

1. ಅಂಬೇಡ್ಕರ್ ಬಿ.ಆರ್., (2015), ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು: ಸಂಪುಟ–1–21, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕುವೆಂಪು ಭಾಷಾಭಾರತಿ ಪ್ರಾಧಿಕಾರ, ಬೆಂಗಳೂರು.
2. ಅರವಿಂದ ಮಾಲಗತ್ತಿ, (2003), ಸಾಹಿತ್ಯ ಸಂಸ್ಕೃತಿ ಮತ್ತು ದಲಿತ ಪ್ರಜ್ಞೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
3. ಭುವನೇಶ್ವರ್ ಎಂ.ಪಿ., (2009), ದಲಿತ ಜ್ವಾಲೆ ಡಾ. ಅಂಬೇಡ್ಕರ್, ಶಬರಿಮಲಯನ್ ಬುಕ್ ಡಿಸ್ಟ್ರಿಬ್ಯೂಟರ್, ಬೆಂಗಳೂರು.

**Funding:**
This study was not funded by any grant.

**Conflict of interest:**
The Authors have no conflict of interest to declare that they are relevant to the content of this article.

**About the License:**
© The Authors 2024. The text of this article is open access and licensed under a Creative Commons Attribution 4.0 International License.